ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ 69/2024**

ಪ್ರ.ವ.ಬೋ.ತಾಃ 13-11-2025

ಚಾಸಾಃ 6 ಪ್ರಾಸಾಃ 4

| | |
|---|---|
| ಸಾಕ್ಷಿಯ ಹೆಸರು | ದಾಸಪ್ಪ |
| ತಂದೆ/ಗಂಡನ ಹೆಸರು | ತಿಮ್ಮಯ್ಯ |
| ವಯಸ್ಸು | 48 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಮಾಡಗಾನಹಟ್ಟಿ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಈಗ ತೋರುತ್ತಿರುವ ಶವ ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.16 ಎಂದು, ಸಾಕ್ಷಿಯ ಸಹಿಯನ್ನು ನಿಪಿ.16(ಎ) ಎಂದು ಗುರುತಿಸಲಾಯಿತು. ನಿಜಲಿಂಗಪ್ಪ ಎಂಬುವವರು ಅಪಘಾತದ ಹಿನ್ನೆಲೆಯಲ್ಲಿ ಮೃತಪಟ್ಟ ಕಾರಣ ಮಧುಗಿರಿ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಆ ದಾಖಲೆಗೆ ಸಹಿ ಮಾಡಿರುತ್ತೇನೆ. ಆಗ ಬೆಳಗ್ಗೆ 11.00 ಗಂಟೆ ಸಮಯವಾಗಿತ್ತು.ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಎರಡು ಫೋಟೋಗಳನ್ನು ತೆಗೆಯಲಾಯಿತು. ಅವುಗಳನ್ನು ನಿಪಿ.17 ಮತ್ತು 18 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ– ಆರೋಪಿತರ ಪರವಾಗಿ ಶ್ರೀ. ಆರ್.ವಿ.ಎಸ್. ವಕೀಲರಿಂದಃ–**

ಆ ಶವ ಪಂಚನಾಮೆಯನ್ನು ಮಧ್ಯಾಹ್ನ 11.00 ಗಂಟೆಗೆ ಮಾಡಿದರು. ಆ ಸಮಯದಲ್ಲಿ ನಾವು ಒಟ್ಟು ಮೂರು ಜನ ಇದ್ದೆವು. ಅವರುಗಳೆಂದರೆ, ಶಿವಣ್ಣ, ಪಾಪಈರಣ್ಣ ಮತ್ತು ನಾನು ಇದ್ದೆವು. ಆ ದಿನ ಪೊಲೀಸರು ನನ್ನನ್ನು ಆ ಸ್ಥಳಕ್ಕೆ ಕರೆದಿರಲಿಲ್ಲ. ನಾನು ನಿಜಲಿಂಗಪ್ಪರವರಿಗೆ ಅಪಘಾತವಾದ ಕಾರಣ ಆ ಸ್ಥಳಕ್ಕೆ ಹೋದೆನು. ಶವ ಪಂಚನಾಮೆಯನ್ನು ಪೊಲೀಸರು ಬರೆದರು. ಅವರ ಹೆಸರು ನನಗೆ ಗೊತ್ತಿಲ್ಲ. ಮೃತ ನಿಜಲಿಂಗಪ್ಪ ನನಗೆ ಸಂಬಂಧಿಕರಲ್ಲ. ಮೃತ ನಿಜಲಿಂಗಪ್ಪರವರು ಸಂಬಂಧಿಕರಿಗೆ ಪರಿಹಾರ ಬರಲಿ ಎಂಬ ಕಾರಣಕ್ಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನನ್ನ ಸಮಕ್ಷಮ ಯಾವುದೇ ಶವ ಪಂಚನಾಮೆ ಮಾಡಿಲ್ಲ, ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಸ

ಮರು ವಿಚಾರಣೆಃ– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ